ಪ್ರ-72-(35)

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ ಮತ್ತು ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರ ನಿಯಮ-72ರ ಅಡಿಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.

## ವಿಷಯ

ವಿಕಲಚೇತನರ ಇಲಾಖೆಯ ಸರ್ಕಾರಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಅಂಗವಿಕಲ ಶಿಕ್ಷಕರಿಗೆ ವಿಶೇಷ ವಿಲೀನಾತಿ ನಿಯಮಗಳನ್ನು ರೂಪಿಸಿ ಪಿಂಚಣಿ ನೀಡುವ ಸಂಬಂಧ ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕಾನೂನು ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳಿಂದ ಸಹಮತಿ ಪಡೆದು ಸಚಿವ ಸಂಪುಟದ ಅನುಮೋದನೆ ಪಡೆದು 2 ವಾರಗಳಲ್ಲಿ ಪಿಂಚಣಿ ನೀಡುವುದಾಗಿ ಮಾನ್ಯ ಸಚಿವರು ಭರವಸೆ ಸಂಖ್ಯೆ: ಮಮಇ/183/ಪಿಹೆಚ್ ಪಿ/2021ರಲ್ಲಿ ಭರವಸೆ ನೀಡಿರುತ್ತಾರೆ. ಈಗಾಗಲೇ ಆರ್ಥಿಕ ಇಲಾಖೆ ದಿನಾಂಕ:16.09.2021 ರಂದು, ಸಿಆಸು ಇಲಾಖೆಯು 04.10.2021 ರಂದು ಮತ್ತು ಕಾನೂನು ಇಲಾಖೆಯು 19.11.2021 ರಂದು ಹಾಗೂ ಸಮಾಜ ಕಲ್ಯಾಣ ಇಲಾಖೆಯು ದಿನಾಂಕ:26.10.2021 ರಂದು ಪಿಂಚಣಿ ನೀಡಲು ಸಹಮತಿ ನೀಡಿದ್ದರೂ ಸಹ ಈವರೆವಿಗೂ ಪಿಂಚಣಿ ನೀಡಲು ಕ್ರಮ ಕೈಗೊಂಡಿರುವುದಿಲ್ಲ.

ಆದರೆ ಸರ್ಕಾರವು (ಮಾನ್ಯ ಸಚಿವರು ಕಳೆದ 8 ಅಧಿವೇಶನಗಳಿಂದಲೂ ಸದನದಲ್ಲಿ) ಪಿಂಚಣಿ ನೀಡಲು ಭರವಸೆ ನೀಡುತ್ತಿದ್ದರೂ ಸಹ, ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಉದಾಸೀನತೆ ಧೋರಣೆಯಿಂದ ಇದುವರೆವಿಗೂ ವಿಲೀನಾತಿ ನಿಯಮಗಳನ್ನು ರೂಪಿಸಿ, ಜೇಷ್ಠತೆಯನ್ನು ನಿಗಧಿಗೊಳಿಸಿ ಪಿಂಚಣಿ ನೀಡಿರುವುದಿಲ್ಲ. ಇದರಿಂದ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ನಿವೃತ್ತ ಅಂಗವಿಕಲರ ಶಿಕ್ಷಕರಿಗೆ ಕೂಡಲೇ ಪಿಂಚಣಿ ನೀಡಲು ನಿರ್ದಿಷ್ಟ ಸಮಯವನ್ನು ಕೋರಿ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ (ಮುಖ್ಯ ಮಂತ್ರಿಗಳ) ಗಮನ ಸೆಳೆಯುತ್ತೇನೆ.

## ಉತ್ತರ

ಹಂಸಧ್ವನಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯ ನಿವೃತ್ತ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಉನ್ನತ ಮಟ್ಟದ ಪ್ರಾಧಿಕಾರದ ಪರಿಶೀಲನೆಗಾಗಿ ಮಂಡಿಸಿದೆ.

ಸಂಖ್ಯೆ:ಮಮಇ 264 ಪಿಹೆಚ್ ಪಿ 2021

Halappa B A

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು